ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂಃಸಾಗ್ರಂಇ/ಎಸ್.ಸಿ.ಪಿ–ಟಿ.ಎಸ್.ಪಿ/ಪು.ಖ/34/2017ಪ್ರ/ 2032

ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ,
ಬೆಂಗಳೂರು–560 001,
ದಿನಾಂಕ: 01-07-2017
email:dpl_dir_acts@yahoo.co.in

---

ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ವಾರ್ತಾ ಭವನ, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು

ಮಾನ್ಯರೆ,

ವಿಷಯ:- ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2017ರಲ್ಲಿ ಪ್ರಥಮವಾಗಿ ಪ್ರಕಟಣೆಯಾದ ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ 2017ರಲ್ಲಿ ಪ್ರಥಮವಾಗಿ ಮುದ್ರಣಗೊಂಡು ಪ್ರಕಟವಾದ ಪರಾಮರ್ಶನ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ ಹಾಗೂ ಮಕ್ಕಳ ಪುಸ್ತಕ, ವಿಶ್ವಕೋಶಗಳು, ಕಾನೂನು, ವಿಜ್ಞಾನ, ತಂತ್ರಜ್ಞಾನ ಹಾಗೂ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕನ್ನಡ ಮತ್ತು ಆಂಗ್ಲ ಪುಸ್ತಕಗಳನ್ನು ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಖರೀದಿಸುವ ಕುರಿತು ವಿವಿಧ ಲೇಖಕ ಪ್ರಕಾಶಕರಿಂದ/ಪ್ರಕಟಣ ಸಂಸ್ಥೆಗಳು/ಸರಬರಾಜುದಾರರಿಂದ ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸಲು ಪ್ರಕಟಣೆ ಹೊರಡಿಸಲಾಗಿದೆ.

ಸದರಿ ಯೋಜನೆಯು ಸರ್ಕಾರದ ವಿಶೇಷ ಯೋಜನೆಯಾಗಿರುವುದರಿಂದ ಪ್ರಕಟಣೆಯನ್ನು ರಾಜ್ಯಾದ್ಯಂತ ಹೆಚ್ಚು ಪ್ರಸಾರವುಳ್ಳ ಕನ್ನಡ ಮತ್ತು ಆಂಗ್ಲಭಾಷಾ ದೈನಂದಿನ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಈ ಮೂಲಕ ಕೋರುತ್ತೇನೆ. ಪ್ರಕಟಣೆಯ ಪ್ರತಿಗಳನ್ನು ಈ ಪತ್ರದ ಜೊತೆ ಲಗತ್ತಿಸಿದೆ.

ಸದರಿ ಪ್ರಕಟಣೆಯ ವೆಚ್ಚವನ್ನು ಇಲಾಖೆಯು ಭರಿಸಲಿದ್ದು, ಪ್ರಕಟವಾದ ಬಗ್ಗೆ ಪ್ರಕಟಿತ ದೈನಂದಿನ ದಿನಪತ್ರಿಕೆಗಳನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಬೆಂಗಳೂರು

ನಾ: SCP-TSP (Book List) Ten Not/Paper Noti.

ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂ.ಸಾಗ್ರಂಇ/ನಿಕ/ಯೋವಿ/ಎಸ್‌ಸಿಪಿ–ಟಿಎಸ್‌ಪಿ/2017ಪ್ರ/2017–18

ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ
4ನೇ ಮಹಡಿ, ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು–560 001,
ದಿನಾಂಕ: 01–07–2017

01

: **ಪ್ರಕಟಣೆ** :

**ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ (ಎಸ್‌ಸಿಪಿ/ಟಿಎಸ್‌ಪಿ) ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ (ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2017ರಲ್ಲಿ ಪ್ರಥಮವಾಗಿ ಮುದ್ರಣಗೊಂಡು ಪ್ರಕಟಣೆಯಾದ ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸುವ ಬಗ್ಗೆ.**

*****

2017–18ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ) ಯೋಜನೆಯಡಿಯಲ್ಲಿ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ (ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2017 ರಲ್ಲಿ ಪ್ರಥಮವಾಗಿ ಮುದ್ರಣಗೊಂಡು ಪ್ರಕಟಣೆಯಾದ ಪರಾಮರ್ಶನ, ಸ್ಪರ್ಧಾತ್ಮಕ, ಪಠ್ಯ ಪುಸ್ತಕ ಹಾಗೂ ಮಕ್ಕಳ ಪುಸ್ತಕ, ವಿಶ್ವಕೋಶಗಳು, ಕಾನೂನು, ವಿಜ್ಞಾನ, ತಂತ್ರಜ್ಞಾನ ಹಾಗೂ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕನ್ನಡ ಮತ್ತು ಆಂಗ್ಲ ಭಾಷಾ ಪುಸ್ತಕಗಳನ್ನು ಖರೀದಿಸಲು ಲೇಖಕ, ಲೇಖಕ–ಪ್ರಕಾಶಕ, ಪ್ರಕಟಣ ಸಂಸ್ಥೆಗಳು ಹಾಗೂ ವಿತರಕರಿಂದ ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಆಯ್ಕೆಗಾಗಿ ಸಲ್ಲಿಸಲಾಗುವ ಪುಸ್ತಕಗಳು ಈ ಕೆಳಗಿನ ನಿಬಂಧನೆಗಳಿಗೆ ಅನುಗುಣವಾಗಿರಬೇಕು.

1. ಪುಸ್ತಕಗಳು 2017ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾಗಿರಬೇಕು.

2. ಪುಸ್ತಕದ ಶೀರ್ಷಿಕೆ, ಗ್ರಂಥಕರ್ತರ ಹೆಸರು, ಪ್ರಕಾಶಕರ ಹೆಸರು, ಪುಟ ಸಂಖ್ಯೆ, ಪ್ರಕಟಣೆಯ ವರ್ಷ, ಇವುಗಳಲ್ಲಿ ತಾಂತ್ರಿಕ ಲೋಪದೋಷಗಳು ಏನಾದರೂ ಇದ್ದಲ್ಲಿ ತಿರಸ್ಕರಿಸುವ ಹಕ್ಕು ಆಯ್ಕೆ ಸಮಿತಿಗೆ ಇದೆ. ಪ್ರಸ್ತುತ ವರ್ಷದಲ್ಲಿಯೇ ಕೃತಿ ಮೊದಲ ಮುದ್ರಣವಾಗಿದೆ ಎಂಬ ಬಗ್ಗೆ ಸುಳ್ಳು ಮಾಹಿತಿ ನೀಡಿದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

3. ಮೂವತ್ತೆರಡು ಪುಟಕ್ಕಿಂತ ಕಡಿಮೆ ಪುಟಗಳಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು (ಮಕ್ಕಳ ಪುಸ್ತಕಕ್ಕೆ ಅನ್ವಯಿಸುವುದಿಲ್ಲ)

4. ಲೇಖಕರೇ ಪ್ರಕಾಶಕರಾಗಿದ್ದಲ್ಲಿ ಅವರೇ ನೇರವಾಗಿ ಅರ್ಜಿ ಸಲ್ಲಿಸಬೇಕು.

5. ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕರು ಅಥವಾ ಅವರ ಅನುಮತಿಯನ್ನು ಅಧಿಕೃತವಾಗಿ ಪಡೆದ ಪುಸ್ತಕ ವ್ಯಾಪಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

6. ನ್ಯೂಸ್ ಪ್ರಿಂಟ್ ಅಥವಾ ಇತರೆ ಅಗ್ಗದ ಕಾಗದದಲ್ಲಿ ಮುದ್ರಿಸಿರುವ ಪುಸ್ತಕಗಳನ್ನು ತಿರಸ್ಕರಿಸಲಾಗುವುದು.

7. ಆಯ್ಕೆಗೆ ಒಪ್ಪಿಸಿದ ಯಾವುದೇ ಗ್ರಂಥಗಳನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವುದಿಲ್ಲ.

8. ನಮೂನೆ ನಿಯಮಿತ ಅರ್ಜಿಯಲ್ಲಿ (**ಅರ್ಜಿ ನಮೂನೆಯು ಯೋಜನಾ ವಿಭಾಗ, ನಿರ್ದೇಶಕರ ಕಛೇರಿ ಹಾಗೂ ರಾಜ್ಯದ ಎಲ್ಲಾ ನಗರ/ಜಿಲ್ಲಾ ಕೇಂದ್ರ ಗ್ರಂಥಾಲಯಗಳಲ್ಲಿ ದೊರೆಯುತ್ತದೆ**) ಅರ್ಜಿಯಲ್ಲಿ 1. ಪುಸ್ತಕದ ಶೀರ್ಷಿಕೆ, 2. ಲೇಖಕರ ಹೆಸರು ಖಾಯಂ ಮತ್ತು ಅಂಚೆ ವಿಳಾಸ, 3. ಪ್ರಕಾಶಕರ ಹೆಸರು ಮತ್ತು ಪೂರ್ಣ ವಿಳಾಸ (ಪುಸ್ತಕದ ಹಕ್ಕು ಹೊಂದಿರುವ ಬಗ್ಗೆ ಮಾಹಿತಿ ಒದಗಿಸುವುದು) 4. ಪ್ರಕಾಶಕರು ಕೆ.ಎಸ್.ಟಿ.ವ್ಯಾಪ್ತಿಗೆ ಒಳಪಟ್ಟಿರುತ್ತಾರೆಯೇ, ಹಾಗಿದ್ದಲ್ಲಿ ಕೆ.ಎಸ್.ಟಿ.ಸಂಖ್ಯೆಯನ್ನು ನಮೂದಿಸುವುದು. 5. ಪುಸ್ತಕದ ಹಕ್ಕು (ದಾಖಲಾತಿ ಒದಗಿಸುವುದು) 6. ಪ್ರಥಮ ಮುದ್ರಣದ ವರ್ಷ 7. ಪುಸ್ತಕದ ಮುಖ ಬೆಲೆ, (ಸ್ಪಷ್ಟವಾಗಿ ಮುದ್ರಿತಗೊಂಡಿರಬೇಕು, ತಿದ್ದಿದಲ್ಲಿ, ಸ್ಟಿಕರ್ ಅಂಟಿಸಿದಲ್ಲಿ, ಅಂತಹ ಪುಸ್ತಕಗಳನ್ನು ಪರಿಗಣಿಸುವುದಿಲ್ಲ) 8. ಸಾಮಾನ್ಯ ಪ್ರತಿ / ಉತ್ತಮ ಪ್ರತಿ, 9. ಪುಟ ಸಂಖ್ಯೆ, ಮೇಲ್ಕಂಡ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ದೃಢೀಕರಿಸುವುದು.

9. ಆಯ್ಕೆಯಾದ ಕನ್ನಡ ಪುಸ್ತಕಗಳಿಗೆ ಸರ್ಕಾರ ನಿಗದಿಪಡಿಸಿದ ಬೆಲೆಯ ಆಧಾರದ ಮೇಲೆ ಬೆಲೆಯನ್ನು ನಿಗದಿಪಡಿಸಲಾಗುವುದು.

10. **ಪುಸ್ತಕ ಸ್ವೀಕೃತಿಯನ್ನು ಮುಖ್ಯ ಗ್ರಂಥಾಲಯಾಧಿಕಾರಿಗಳು(ಪ್ರ), ಯೋಜನಾ ವಿಭಾಗ, ನಿರ್ದೇಶನಾಲಯ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇಲ್ಲಿಗೆ ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮುಖಾಂತರ ದಿನಾಂಕ:14–08–2017ರ ಸಂಜೆ 5–30ರ ಒಳಗಾಗಿ ತಲುಪುವಂತೆ ಸಲ್ಲಿಸಿ ಸ್ವೀಕೃತಿಯನ್ನು ಪಡೆಯುವುದು. ತದನಂತರ ಬಂದ ಯಾವುದೇ ಪುಸ್ತಕಗಳನ್ನು ಆಯ್ಕೆಗೆ ಸ್ವೀಕರಿಸಲಾಗುವುದಿಲ್ಲ.**

11. ಆಯ್ಕೆಗಾಗಿ ಸಲ್ಲಿಸುವ ಗ್ರಂಥಗಳ ಶೀರ್ಷಿಕೆ ಪುಟದ ಹಿಂಭಾಗದ ಪುಟದಲ್ಲಿ (imprint page) ಈ ಕೆಳಗಿನ ಅಂಶಗಳನ್ನು ಮುದ್ರಿಸುವುದು ಕಡ್ಡಾಯವಾಗಿರುತ್ತದೆ. ಶೀರ್ಷಿಕೆ, ಲೇಖಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಪುಟಗಳು, ಪುಸ್ತಕದ ಅಳತೆ, ಉಪಯೋಗಿಸಿರುವ ಕಾಗದ, ಬೆಲೆ, ವರ್ಷ, ಮುಖಪುಟ, ವಿನ್ಯಾಸ, ಒಳಪುಟ, ರೇಖಾಚಿತ್ರ, ಪ್ರಕಾಶಕರು ಮತ್ತು ಮುದ್ರಕರು ಅವರ ವಿಳಾಸಗಳನ್ನು ಮುದ್ರಿಸಿರಬೇಕು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು**

1. ಪುಸ್ತಕದ ಒಂದು ಪ್ರತಿ
2. ಕೃತಿಯು ಪ್ರಥಮ ಮುದ್ರಣ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು.
3. ಶಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನಡಿ ನೋಂದಾಯಿಸಿದ ಆಯಾ ಕಾಲಕ್ಕೆ ನವೀಕರಿಸಿದ ನೋಂದಣಿ ಪತ್ರದ ದೃಢೀಕೃತ ನಕಲುಪ್ರತಿ. (ಲೇಖಕ, ಲೇಖಕ–ಪ್ರಕಾಶಕರಿಗೆ ಅನ್ವಯಿಸುವುದಿಲ್ಲ) ಅಥವಾ
4. ರಾಜ್ಯ/ಕೇಂದ್ರ ತೆರಿಗೆ ಇಲಾಖೆಯಿಂದ ನೋಂದಾಯಿಸಲ್ಪಟ್ಟ ನೋಂದಣಿ ಪತ್ರದ ದೃಢೀಕೃತ ನಕಲು ಪ್ರತಿ. (ಲೇಖಕ, ಲೇಖಕ–ಪ್ರಕಾಶಕರಿಗೆ ಅನ್ವಯಿಸುವುದಿಲ್ಲ)
5. ಸರಬರಾಜು ಹಕ್ಕನ್ನು ಪಡೆದಿದ್ದಲ್ಲಿ ಅದರ ದೃಢೀಕೃತ ನಕಲು ಪ್ರತಿ.
6. ಪ್ಯಾನ್ ಕಾರ್ಡ್‌ನ ದೃಢೀಕೃತ ನಕಲು ಪ್ರತಿ.
7. ಆಧಾರ್ ಕಾರ್ಡ್‌ನ ದೃಢೀಕೃತ ನಕಲು ಪ್ರತಿ.

**ವಿಶೇಷ ಸೂಚನೆ:–**

**ಸರ್ಕಾರದ ಆದೇಶದಂತೆ ಬಿಲ್ಲಿನ ಪಾವತಿಯು ಖಜಾನೆ–2 ಮುಖಾಂತರ ಆಗುವುದರಿಂದ ಖಜಾನೆ–2ರಲ್ಲಿ ನೊಂದಣಿಯಾಗಿದ್ದರೆ ನೋಂದಣಿ ಸಂಖ್ಯೆಯನ್ನು ನಮೂದಿಸುವುದು ಇಲ್ಲದಿದ್ದಲ್ಲಿ ನೋಂದಣಿಯಾಗದ ಲೇಖಕ, ಪ್ರಕಾಶಕರು, ಪ್ರಕಾಶನ ಸಂಸ್ಥೆಗಳು ಹಾಗೂ ಸರಬರಾಜುದಾರರು ಕಡ್ಡಾಯವಾಗಿ ಖಜಾನೆ–2ರಲ್ಲಿ ನೋಂದಣಿಯಾಗುವುದು.**

ಈ ಮೇಲ್ಕಂಡ ದಾಖಲಾತಿಗಳು ಇಲ್ಲದಿದ್ದಲ್ಲಿ ಪುಸ್ತಕವನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ karnatakapublic library. gov.in ನಲ್ಲಿ ಸಂಪರ್ಕಿಸುವುದು.

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಹಾಗೂ ಸದಸ್ಯ ಕಾರ್ಯದರ್ಶಿಗಳು
ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿ,
ಬೆಂಗಳೂರು.

ನಾ: SCP-TSP (Book List) Ten Not/Paper Noti.

ಕರ್ನಾಟಕ ಸರ್ಕಾರ
ಸಾರ್ವಜನಿಕ ಗ್ರಂಥಾಲಯ ಇಲಾಖೆ
ನಿರ್ದೇಶಕರ ಕಛೇರಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ,ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-560 001.

**ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧೀನ ಗ್ರಂಥಾಲಯಗಳಿಗೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ (ಎಸ್‌ಸಿಪಿ/ಟಿಎಸ್‌ಪಿ)ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ 2017 ರಲ್ಲಿ ಪ್ರಥಮವಾಗಿ ಪ್ರಕಟಣೆಯಾದ ಪುಸ್ತಕಗಳನ್ನು ಆಯ್ಕೆಗೆ ಸಮಿತಿಗೆ ಸಲ್ಲಿಸುವ ಅರ್ಜಿ ನಮೂನೆ.**

ಅರ್ಜಿದಾರರ
ಇತ್ತೀಚಿನ ಭಾವಚಿತ್ರ

| | | | |
|---|---|---|---|
| 1. | | ಅರ್ಜಿದಾರರ ಹೆಸರು ಮತ್ತು ಖಾಯಂ ವಿಳಾಸ ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | ಪಿನ್‌ಕೋಡ್ |
| 2. | | ಪ್ರಕಾಶಕರ ಹೆಸರು ಮತ್ತು ಖಾಯಂ ವಿಳಾಸ ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | ಪಿನ್‌ಕೋಡ್ |
| 3. | | ಸರಬರಾಜುದಾರರ ಹೆಸರು ಮತ್ತು ಖಾಯಂ ವಿಳಾಸ ಸಂಚಾರಿ/ದೂರವಾಣಿ ಸಂಖ್ಯೆ (ಎಸ್.ಟಿ.ಡಿ. ಕೋಡ್ ಸಹಿತ) | ಪಿನ್‌ಕೋಡ್ |
| 4. | (a) | ಅರ್ಜಿದಾರರು ಪುಸ್ತಕದ ಲೇಖಕರೆ/ಸಂಪಾದಕರೆ/ ಅನುವಾದಕರೆ ? | |
| | (b) | ಗ್ರಂಥವು ಅನುವಾದವಾಗಿದ್ದಲ್ಲಿ, ಪುಸ್ತಕದ ಮೂಲ ಲೇಖಕರ ಹೆಸರು | |
| 5. | | ಅರ್ಜಿದಾರರು ಕಾಪಿರೈಟ್ ಹೊಂದಿರುವರೇ (ಕಾಪಿ ರೈಟ್ ಹಕ್ಕನ್ನು ಹೊಂದಿರುವವರು ಮಾರಾಟಗಾರರಿಗೆ ಹಕ್ಕನ್ನು ನೀಡಿದ್ದಲ್ಲಿ ರೂ.50/- ಛಾಯಾಕಾಗದದಲ್ಲಿ ಅಫಿಡೇವಿಟ್‌ನ್ನು ಕಡ್ಡಾಯವಾಗಿ ಸಲ್ಲಿಸುವುದು | |
| 6. | (a) | ಪುಸ್ತಕದ ಶಿರೋನಾಮೆ | |
| | (b) | ಉಪ ಶೀರ್ಷಿಕೆ (ಇದ್ದಲ್ಲಿ) | |
| | (c) | ಸಂಪುಟಗಳ ಸಂಖ್ಯೆ (ಇದ್ದಲ್ಲಿ) | |
| | (d) | ಪುಸ್ತಕದ ಅಳತೆ | |

| | | | |
|---|---|---|---|
| | (e) | ಪುಟಗಳ ಸಂಖ್ಯೆ | |
| | (f) | ಪುಸ್ತಕದ ಭಾಷೆ | |
| | (g) | ಉತ್ತಮ ಪ್ರತಿಯೇ ಅಥವಾ ಸಾದ ಪ್ರತಿಯೇ | |
| | (h) | ಲೇಖಕರ ಹೆಸರು | |
| | (i) | ಪುಸ್ತಕವು ಯಾವ ವಿಷಯದ ಬಗ್ಗೆ ಮಾಹಿತಿ ನೀಡುತ್ತದೆ | |
| 7. | | ಪ್ರಕಟಣಾ ವರ್ಷ | |
| 8. | | ಮೂಲ ಅಥವಾ ಅನುವಾದಿತ ಗ್ರಂಥವೇ? | |
| 9. | | ಪುಸ್ತಕ ಮುದ್ರಿಸಲು ಬಳಸಿದ ಕಾಗದದ ಗುಣಮಟ್ಟ (ಜಿ.ಎಸ್.ಎಂ.ನಲ್ಲಿ ನಮೂದಿಸುವುದು) | |
| 10. | | ಅರ್ಜಿದಾರರು ಕಡ್ಡಾಯವಾಗಿ ಪ್ಯಾನ್‌ಸಂಖ್ಯೆ / ಟಿನ್ ಸಂಖ್ಯೆಯನ್ನು ನಮೂದಿಸುವುದು ಹಾಗೂ ಅದರ ದೃಢೀಕೃತ ನಕಲು ಪ್ರತಿ ಮತ್ತು ಖಜಾನೆ-2ರಲ್ಲಿ ನೋಂದಣಿಯಾದ ಬಗ್ಗೆ ನೋಂದಣಿ ಸಂಖ್ಯೆಯ ವಿವರವನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು. | |
| 11. | | ಒಟ್ಟು ಮುದ್ರಿತ ಪ್ರತಿಗಳು | |
| 12. | | ಪುಸ್ತಕದ ಮೌಲ್ಯ | ಉತ್ತಮ ಪ್ರತಿ ರೂ. . . . . . . . . . . .<br>ಸಾದಾ ಪ್ರತಿ ರೂ. . . . . . . . . . . . |

## ಘೋಷಣೆ

ಶ್ರೀಮತಿ / ಶ್ರೀ ______________________ ಆದ ನಾನು, ಮೇಲೆ ದಾಖಲಿಸಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ತಪ್ಪು ಮಾಹಿತಿ ನೀಡಿರುವುದು ಕಂಡು ಬಂದಲ್ಲಿ, ಯಾವುದೇ ಮಾಹಿತಿ ನೀಡದೆ ನನ್ನ ಅರ್ಜಿಯನ್ನು ತಿರಸ್ಕರಿಸುವ ಮತ್ತು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕನ್ನು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ಹೊಂದಿರುತ್ತಾರೆ.

ಸ್ಥಳ :

ದಿನಾಂಕ :

ಅರ್ಜಿದಾರರ ಸಹಿ ______________________

ಅರ್ಜಿದಾರರ ಹೆಸರು (                    )

ವಿ.ಸೂ.:

1. ಪ್ರತಿ ಶೀರ್ಷಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಅರ್ಜಿ ನಮೂನೆಯಲ್ಲಿ ವಿವರ ಸಲ್ಲಿಸುವುದು.
2. ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ಮುಖ್ಯ ಗ್ರಂಥಾಲಯಾಧಿಕಾರಿ (ಪ್ರ), ನಿರ್ದೇಶಕರ ಕಛೇರಿ, ಯೋಜನಾ ವಿಭಾಗ, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು – 560 001 ಇಲ್ಲಿಗೆ ದಿನಾಂಕ :14-08-2017 ಸಂಜೆ 5.30 ಗಂಟೆ ಒಳಗಾಗಿ ಸಲ್ಲಿಸುವುದು. ನಂತರ ಬಂದ ಪುಸ್ತಕಗಳನ್ನು ಪರಿಗಣಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸದರಿ ಕಛೇರಿಯನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ 22864990 ಹಾಗೂ 22867358.

**ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:**

1) ಶಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನಡಿ ನೋಂದಾಯಿಸಿದ ಆಯಾ ಕಾಲಕ್ಕೆ ನವೀಕರಿಸಿದ ನೋಂದಣಿ ಪತ್ರದ ದೃಢೀಕೃತ ನಕಲು ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು. (ಲೇಖಕ, ಲೇಖಕ-ಪ್ರಕಾಶಕರಿಗೆ ಅನ್ವಯಿಸುವುದಿಲ್ಲ)
2) ರಾಜ್ಯ/ಕೇಂದ್ರ ತೆರಿಗೆ ಇಲಾಖೆಯಿಂದ ನೋಂದಾಯಿಸಲ್ಪಟ್ಟ ನೋಂದಣಿ ಪತ್ರದ ದೃಢೀಕೃತ ನಕಲು ಪ್ರತಿ.
3) ಸರಬರಾಜು ಹಕ್ಕನ್ನು ಪಡೆದಿದ್ದಲ್ಲಿ ಅದರ ದೃಢೀಕೃತ ನಕಲು ಪ್ರತಿ.
4) ಅರ್ಜಿದಾರರ ವಿಳಾಸದ ದಾಖಲೆಯ ಪ್ರತಿ - ಮತದಾರರ ಗುರುತಿನ ಚೀಟಿ/ಆಧಾರ್ ಕಾರ್ಡ್
5) ಸರ್ಕಾರಿ ಆದೇಶದನುಸಾರ ಎಲ್ಲಾ ಲೇಖಕ ಪ್ರಕಾಶಕರು/ಸರಬರಾಜುದಾರರು/ಪ್ರಕಟಣ ಸಂಸ್ಥೆಗಳು ಖಜಾನೆ-2ರಲ್ಲಿ ಕಡ್ಡಾಯವಾಗಿ ನೋಂದಣಿಯಾಗಬೇಕಾಗಿರುವುದರಿಂದ ನೋಂದಣಿಯಾಗುವುದು. ಈಗಾಗಲೇ ನೋಂದಣಿಯಾಗಿದ್ದಲ್ಲಿ, ನೋಂದಣಿ ಸಂಖ್ಯೆಯ ವಿವರವನ್ನು ಲಗತ್ತಿಸುವುದು.
6) ಯಾವುದೇ ವಿಷಯದಲ್ಲೂ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾದದ್ದು.

ನಕ: SCP-TSP-Book List Ten. Noti/New book sel.format